3) ಶಾಂತಿನಗರ ಹಾಗೂ ಅಕ್ಕಿತಿಮ್ಮನಹಳ್ಳಿ ಪ್ರದೇಶಗಳಲ್ಲಿ ಪದೇ ಪದೇ ಆಗುತ್ತಿರುವ ವಿದ್ಯುತ್ ಅಡಚಣೆಯನ್ನು ತಪ್ಪಿಸಲು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ.

ಅ) ಕಂಠೀರವ ಸ್ಟೇಡಿಯಂ ಸ್ವಿಚಿಂಗ್ ಸ್ಟೇಷನನಿಂದ ಯೂನಿಟ್ ಬಿಲ್ಡಿಂಗರೆಗೆ ದೋಷಯುಕ್ತ 11 ಕೆ.ವಿ.ಕೇಬಲನ್ನು ಬದಲಾಯಿಸುವುದು. ಈ ಕೆಲಸವು ತೀವ್ರ ಪ್ರಗತಿಯಲ್ಲಿದೆ.

ಆ) ಕೇಬಲ್ ಅಥವಾ ಲೈನನಲ್ಲಿ ದೋಷವುಂಟಾದಾಗ ಸಾಧ್ಯವಾದಷ್ಟು ಮಟ್ಟಿಗೆ ಪರ್ಯಾಯ ವಿದ್ಯುತ್ ಸರಬರಾಜಿಗೆ ವ್ಯವಸ್ಥೆ ಮಾಡಲಾಗುವುದು.

ಅಲ್ಲದೆ ಶಾಂತಿನಗರ ಮತ್ತು ಅಕ್ಕಿತಿಮ್ಮನಹಳ್ಳಿ ಪ್ರದೇಶಗಳ ವಿದ್ಯುತ್ ಸರಬರಾಜು ಸುಧಾರಿಸಲು 'ಬಿ' ಸ್ಟೇಷನನಿಂದ ಸಿದ್ದಯ್ಯ ರಸ್ತೆವರೆಗೆ ಹೊಸದಾಗಿ 11 ಕೆ.ವಿ. ಕೇಬಲ್ ಹಾಕಲು ಮತ್ತು ಹೆಚ್ಚುವರಿ ವಿತರಣಾ ಟ್ರಾನ್ಸಫಾರ್ಮರು ಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಿಸಲಾಗಿದೆ. ಹೆಚ್ಚುವರಿ ಐದು ವಿತರಣಾ ಟ್ರಾನ್ಸಫಾರ್ಮರುಗಳ ಸ್ಥಾಪನೆಯ ಕೆಲಸವು ಪ್ರಗತಿಯಲ್ಲಿದೆ.

ಜಿಲ್ಲಾಪಂಚಾಯ್ತಿ ಮತ್ತು ತಾಲ್ಲೂಕು ಪಂಚಾಯ್ತಿ ಅಧ್ಯಕ್ಷರುಗಳ ಹಾಗೂ ಉಪಾಧ್ಯಕ್ಷರುಗಳ ಪದಾವಧಿ ವಿಸ್ತರಣೆ.

73 - ಶ್ರೀ ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಜಿಲ್ಲಾ ಪಂಚಾಯತ್ ಹಾಗೂ ತಾಲ್ಲೂಕು ಪಂಚಾಯ್ತಿಗಳ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರುಗಳ ಅಧಿಕಾರಾವಧಿಯನ್ನು ನಿಗಧಿಪಡಿಸಲಾಗಿದೆಯೇ?

ಆ) ಇವರುಗಳ ಅಧಿಕಾರ ಅವಧಿಯನ್ನು ಒಂದು ವರ್ಷಗಳಿಗೆ ನಿಗದಿಪಡಿಸುವ ವಿಚಾರದ ಬಗ್ಗೆ ಸರ್ಕಾರ ಪರಿಶೀಲನೆ ನಡೆಸುತ್ತಿರುವುದು ನಿಜವೇ?

ಇ) ಒಂದು ವರ್ಷಗಳಲ್ಲಿ ಯಾವುದೇ ಅಭಿವೃದ್ಧಿಗಳನ್ನು ಮಾಡಲು ಸಾಧ್ಯವಾಗದೇ ಇರುವುದರಿಂದ ಇವರುಗಳ ಅಧಿಕಾರಾವಧಿಯನ್ನು ಕನಿಷ್ಟ ಎರಡೂವರೆ ವರ್ಷಗಳಿಗೆ ನಿಗದಿಪಡಿಸಲು ಇರುವ ತೊಂದರೆಗಳೇನು

ಈ) ಇದಲ್ಲದೆ ತಾಲ್ಲೂಕು ಪಂಚಾಯ್ತಿ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರುಗಳಿಗೆ ಇದುವರೆವಿಗೂ ವಾಹನಗಳ ಸೌಕರ್ಯಗಳನ್ನು ನೀಡಲ್ಲದಿರುವುದರಿಂದ ಅವರು ಕಾರ್ಯನಿರ್ವಹಿಸಲು ತೊಂದರೆಯಾಗುತ್ತಿರುವುದರಿಂದ ಅವರುಗಳಿಗೆ ಶೀಘ್ರವಾಗಿ ವಾಹನ ಸೌಕರ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು):

ಅ) ಹೌದು.

ಆ) ಹೌದು

ಇ) ಈ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಈ) ಪರಿಶೀಲನೆಯಲ್ಲಿದೆ.

1994-95ರಲ್ಲಿ ರಸ್ತೆ ದುರಸ್ತಿಗಳ ಮೇಲಿನ ವೆಚ್ಚ ಕುರಿತು

74 - ಶ್ರೀ ಜೆ.ಟಿ. ಪಾಟೀಲ್ (ಬೀಳಗಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಪ್ರತಿಯೊಂದು ತಾಲ್ಲೂಕುಗಳಿಗೆ 1994ನೇ ಡಿಸೆಂಬರನಿಂದ 1995ರ ಮಾರ್ಚ್ 31ವರೆಗೆ ರಸ್ತೆಗಳ ದುರಸ್ಥಿ ಹಾಗೂ ಹೊಸ ರಸ್ತೆಗಳನ್ನು ನಿರ್ಮಿಸಲು ಮಾಡಿದ ವೆಚ್ಚವೆಷ್ಟು?

ಆ) ಹಾಗೂ ಏಪ್ರಿಲ್ 95ನೇ ತಿಂಗಳಿನಿಂದ ಜುಲೈ 95ನೇ ತಿಂಗಳವರೆಗೆ ಹೊಸ ರಸ್ತೆ ನಿರ್ಮಾಣ ಹಾಗೂ ರಸ್ತೆ ದುರಸ್ಥಿಗಾಗಿ ಮಾಡಿದ ವೆಚ್ಚವೆಷ್ಟು?

ಇ) 1995ನೇ ಮಾರ್ಚ್ 31ರ ನಂತರ ಜುಲೈ 31ರ ತನಕ ಪ್ರತಿಯೊಂದು ತಾಲ್ಲೂಕಿಗೆ ಬಿಡುಗಡೆ ಮಾಡಿದ ಹಣವೆಷ್ಟು(ತಾಲ್ಲೂಕುವಾರು ವಿವರಗಳನ್ನು ನೀಡುವುದು)

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ಲೋಕೋಪಯೋಗಿ ಇಲಾಖಾ ವ್ಯಾಪ್ತಿಯಲ್ಲಿ ರಾಜ್ಯ ಹೆದ್ದಾರಿ ಹಾಗೂ ಮುಖ್ಯ ಜಿಲ್ಲಾ ರಸ್ತೆಗಳಿದ್ದು ಹೊಸ ರಸ್ತೆಗಳನ್ನು ನಿರ್ಮಾಣ ಮಾಡುವುದಿಲ್ಲ. ಹೊಸ ರಸ್ತೆಗಳ ನಿರ್ಮಾಣ (ಹಳ್ಳಿ ದರ್ಜೆ ರಸ್ತೆಗಳು) ಜಿಲ್ಲಾ ಪಂಚಾಯತಗಳ ವ್ಯಾಪ್ತಿಯಲ್ಲಿ ಬರುತ್ತದೆ. ಲೋಕೋಪಯೋಗಿ ಇಲಾಖೆಯಲ್ಲಿ ಉಪವಿಭಾಗವಾರು ಮಾಹಿತಿ ಇರುತ್ತದೆ. ತಾಲ್ಲೂಕುವಾರು ಮಾಹಿತಿಯನ್ನು ಪ್ರತ್ಯೇಕವಾಗಿ ಇಡುವುದಿಲ್ಲ. ಪ್ರಸಕ್ತ ಉಪವಿಭಾಗವಾರು ವೆಚ್ಚ ಹಾಗೂ ಉಪವಿಭಾಗಗಳ ವ್ಯಾಪ್ತಿಯಲ್ಲಿ ಬರುವ ತಾಲ್ಲೂಕುಗಳ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಲೋಕೋಪಯೋಗಿ ಇಲಾಖಾ ವ್ಯಾಪ್ತಿಯಲ್ಲಿ ರಾಜ್ಯ ಹೆದ್ದಾರಿ ಹಾಗೂ ಮುಖ್ಯ ಜಿಲ್ಲಾ ರಸ್ತೆಗಳಿದ್ದು ಹೊಸ ರಸ್ತೆಗಳನ್ನು ನಿರ್ಮಾಣ ಮಾಡುವುದಿಲ್ಲ. ಹೊಸ ರಸ್ತೆಗಳ ನಿರ್ಮಾಣ (ಹಳ್ಳಿ ದರ್ಜೆ ರಸ್ತೆಗಳು) ಜಿಲ್ಲಾ ಪಂಚಾಯತ್‌ಗಳ ವ್ಯಾಪ್ತಿಯಲ್ಲಿ ಬರುತ್ತದೆ. ಲೋಕೋಪಯೋಗಿ ಇಲಾಖೆಯಲ್ಲಿ ಉಪವಿಭಾಗವಾರು ಮಾಹಿತಿ ಇರುತ್ತದೆ. ತಾಲ್ಲೂಕುವಾರು ಮಾಹಿತಿಯನ್ನು ಪ್ರತ್ಯೇಕವಾಗಿ ಇಡುವುದಿಲ್ಲ. ಪ್ರಸಕ್ತ ಉಪವಿಭಾಗವಾರು ವೆಚ್ಚ ಹಾಗೂ ಉಪವಿಭಾಗಗಳ ವ್ಯಾಪ್ತಿಯಲ್ಲಿ ಬರುವ ತಾಲ್ಲೂಕು ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಲೋಕೋಪಯೋಗಿ ಇಲಾಖಾ ವ್ಯಾಪ್ತಿಯಲ್ಲಿ ತಾಲ್ಲೂಕುವಾರು ಹಣಬಿಡುಗಡೆ ಮಾಡುವುದಿಲ್ಲ ಕಾಮಗಾರಿಗಳಿಗೆ ಒಟ್ಟಾರೆಯಾಗಿ ಮುಖ್ಯ ಇಂಜಿನಿಯರ್‌ರವರುಗಳು ಲೋಕೋಪಯೋಗಿ ಇಲಾಖಾ ವಿಭಾಗಗಳಿಗೆ ಹಣ ಭರವಸೆ ಪತ್ರ ಬಿಡುಗಡೆ ಮಾಡುತ್ತಾರೆ. ಈ ಅವಧಿಯಲ್ಲಿ ಮಾಡಿರುವ ವೆಚ್ಚದ ವಿವರ ಅನುಬಂಧದಲ್ಲಿ ನೀಡಿದೆ.